# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಕ್ರಯಪತ್ರದ ಮಾದರಿ ನಮೂನೆ (ಕೈಗಾರಿಕಾ ನಿವೇಶನಗಳಿಗೆ)

ಈ ಕ್ರಯಪತ್ರವನ್ನು ಬೆಂಗಳೂರಿನಲ್ಲಿ____________________ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪ್ರತಿನಿಧಿಸುವ ಇದರಲ್ಲಿ ಇನ್ನು ಮುಂದೆ ``ಮಾರಾಟಗಾರ" ಎಂದು ಕರೆಯಲಾದ (ಮಾರಾಟಗಾರ ಶಬ್ದವು ಪದದಲ್ಲಿರುವ ಅವರ ಉತ್ತರಾಧಿಕಾರಿಯನ್ನು ಒಳಗೊಂಡಿರುತ್ತೆದೆ) ಉಪಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಒಂದು ಭಾಗವಾಗಿ ಮತ್ತು ಶ್ರೀ / ಶ್ರೀಮತಿ________________________________________ಇವರನ್ನು ಇಲ್ಲಿ ಇನ್ನು ಮುಂದೆ ಖರೀದಿದಾರ ಎಂದು ಕರೆಯಲಾಗಿದ್ದು (ಖರೀದಿದಾರ ಶಬ್ದವು ಅವರ ವಾರಸುದಾರರನ್ನು, ನಿರ್ವಾಹಕರನ್ನು, ಆಡಳಿತಗಾರರನ್ನು ಮತ್ತು ಹಸ್ತಾಂತರ ಪಡೆದವರನ್ನು ಒಳಗೊಳ್ಳುತ್ತದೆ)ಇವರು ಮತ್ತೊಂದು ಭಾಗವಾಗಿ ಇವರಿಗೆ ಬರೆದಿಕೊಟ್ಟಿರುತ್ತಾರೆ.

ಕರ್ನಾಟಕ ಸರ್ಕಾರವು____________________ಬೆಂಗಳೂರು ಇಲ್ಲಿ ರೂಪಿಸಿ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸವನ್ನು ಮಾರಾಟಗಾರರಿಗೆ ವಹಿಸಿಕೊಟ್ಟಿದೆ ಮತ್ತು ಕರ್ನಾಟಕ ಸರ್ಕಾರವು__________________ಎಂಬಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿಸುವುದಕ್ಕಾಗಿ ನಿವೇಶನಗಳನ್ನು ರಚಿಸುವುದಕ್ಕೆ ಮಂಜೂರಾತಿ ನೀಡಿದೆ ಮತ್ತು ಕರ್ನಾಟಕ ಸರ್ಕಾರವು ನಿವೇಶನ ನೀಡುವುದನ್ನು ಸಹ ಅನುಮೋದಿಸಿದೆ.

ಮಾರಾಟಗಾರರು____________________ಎಂಬಲ್ಲಿ ರಚಿಸಿರುವ ನಿವೇಶನಗಳ ಸ್ವಾಧೀನತೆಯನ್ನು, ಪೂರ್ಣ ಅಧಿಕಾರ, ಹಕ್ಕು, ಹಿತಾಸಕ್ತಿಯನ್ನು ಹೊಂದಿರುತ್ತಾರೆ.

ಮಾರಾಟಗಾರರು ಇದರ ಅನುಸೂಚಿಯಲ್ಲಿ ಹೆಚ್ಚು ವಿಶದವಾಗಿ ವಿವರಿಸಿರುವ____________________ಬೆಂಗಳೂರು ಇಲ್ಲಿ____________ಸಂಖ್ಯೆಯುಳ್ಳ ನಿವೇಶನವನ್ನು ಖರೀದಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ ಮತ್ತು ಖರೀದಿದಾರರು ಈನಿವೇಶನವನ್ನು____________ ರೂ.ಗಳಿಗೆ (____________________________________________ ________________ ರೂಪಾಯಿಗಳಿಗೆ ) ಖರೀದಿ ಮಾಡಲು ಒಪ್ಪಿರುತ್ತಾರೆ.

ಮಾರಾಟಗಾರರ ಮತ್ತು ಖರೀದಿದಾರರ ನಡುವೆ____________________ದಿನಾಂಕದಂದು ಮಾಡಿಕೊಂಡ ಸದರಿ ಒಪ್ಪಂದದ ಪ್ರಕಾರ ಮತ್ತು ಮೇಲೆ ತಿಳಿಸಿದ ಒಪ್ಪಂದದಂತೆ ಖರೀದಿದಾರರು ಎಲ್ಲಾ ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸಿದ್ದಾರೆ ಮತ್ತು ಖರೀದಿದಾರರು ಈ ಮೂಲಕ ಮಾರಾಟಗಾರರಿಗೆ______________________ರೂ.ಗಳನ್ನು (______________________________________________________________ ರೂ.ಗಳನ್ನು) ಪಾವತಿ ಮಾಡಿದ್ದಾರೆ ಮತ್ತು ಈ ಮೊತ್ತ ಸ್ವೀಕರಿಸುವುದನ್ನು ಮಾರಾಟಗಾರರು ಒಪ್ಪಿಕೊಂಡಿದ್ದಾರೆ ಮತ್ತು ಈ ಮೂಲಕ ಸದರಿ ಎಲ್ಲಾ ಋಣಭಾರಗಳಿಂದ, ಕಾನೂನುಬದ್ಧ ಹೊರದೂಡುವಿಕೆಯಿಂದ ತೆರಿಗೆ ಬಾಕಿಯಿಂದ ಅಥವಾ ಯಾವುದೇ ರೀತಿಯ ಕ್ಲೇಮಿನಿಂದ ಅಥವಾ ಹಿತಾಸಕ್ತಿಯಿಂದ ಮುಕ್ತವಾಗಿರುವ ಸ್ವಂತ ಸ್ವತ್ತಿನ ಹಾಗೆ ಈ ಮೂಲಕ ನಿರಾತಂಕವಾಗಿ ಧಾರಣ ಮಾಡಲು, ಅನುಭವಿಸಿಕೊಂಡು ಬರಲು, ಮಾರಾಟ ಮಾಡಲು, ಎಲ್ಲ ಹಿತಾಸಕ್ತಿಯನ್ನು ವರ್ಗಾಯಿಸಿ ನೀಡಿದ್ದಾರೆ. ಹಸ್ತಾಂತರಿಸಿ ಕೊಟ್ಟಿರುತ್ತಾರೆ ಎಂಬುದಕ್ಕೆ ಈ ಒಡಂಬಡಿಕೆಯು ಸಾಕ್ಷಿಯಾಗಿರುತ್ತದೆ.

ಈ ಕೆಳಗೆ ವಿವರಿಸಿದ ಷೆಡ್ಯೂಲ್ ಜಮೀನನ್ನು ಯಾವುದೇ ರೀತಿಯಲ್ಲಿ ಬೇರೆ ಯಾರಿಗೂ ಪರಭಾರ ಮಾಡಿಲ್ಲವೆಂದು ಮತ್ತು ಸಪರಿ ಜಮೀನು ಎಲ್ಲ ಋಣಭಾರಗಳಿಂದ ಮುಕ್ತವಾಗಿದೆಯೆಂದು ಮಾರಾಟಗಾರರು ಖರೀದಿದಾರರಿಗೆ ಆಶ್ವಾಸನೆ ನೀಡಿರುತ್ತಾರೆ.

ಇಷ್ಟೇ ಅಲ್ಲದೆ ಮಾರಾಟಗಾರರು ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಹೆಚ್ಚು ಸಂಪೂರ್ಣ ಆಶ್ವಾಸನೆ ಹಾಗೂ ದೃಢೀಕರಣಕ್ಕಾಗಿ ಸಂಬಂಧಗಳಿಗೆ ತಕ್ಕ ಹಾಗೆ ಅಂಥ ಎಲ್ಲಾ ಕೃತ್ಯಗಳನ್ನು ಮಾಡಲು ಅಥವಾ ಮಾಡುವುದಕ್ಕೆ ವ್ಯವಸ್ಥೆ ಮಾಡಲು ಮತ್ತು ಮೇಲೆ ತಿಳಿಸಿದ ಒಡಂಬಡಿಕೆಯನ್ನು ಯಾವುದೇ ರೀತಿ ಉಲ್ಲಂಘಿಸಿದ ಅಥವಾ ತೊಂದರೆಯ ಕಾರಣಕ್ಕಾಗಿ ಎಲ್ಲ ಕ್ರಮ, ದಾವೆ, ಕ್ಲೇಮು, ಬೇಡಿಕೆಯಿಂದ ಉಂಟಾದ ನಷ್ಟಗಳನ್ನು ಖರೀದಿದಾರರಿಗೆ ತುಂಬಿಕೊಡಲು ಭರವಸೆ ನೀಡಿರುತ್ತಾರೆ.

## ಷೆಡ್ಯೂಲ್

____________________ಎಂಬಲ್ಲಿ ಇರುವ ಕೈಗಾರಿಕಾ ನಿವೇಶನ ಸಂಖ್ಯೆ____________________ಹೊಂದಿರುವ ಪೂರ್ವ-ಪಶ್ಚಿಮ ____________________ಚ.ಅ./ಚ.ಮೀ. ಉತ್ತರ-ದಕ್ಷಿಣ____________________ಚ.ಅ./ಚ.ಮೀ. ಅಳತೆಯುಳ್ಳ ಕಾರ್ಖಾನೆಯ ಜಮೀನು ಮತ್ತು ಇದರ ಚಕ್ಕುಬಂದಿ:

ಪೂರ್ವಕ್ಕೆ:

ಪಶ್ಚಿಮಕ್ಕೆ:

ಉತ್ತರಕ್ಕೆ:

ದಕ್ಷಿಣಕ್ಕೆ:

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಬೆಂಗಳೂರಿನಲ್ಲಿ ಮೇಲೆ ತಿಳಿಸಿದ ____________________ ದಿನಾಂಕ____________________ತಿಂಗಳು____________________ ವರ್ಷದಂದು ತಮ್ಮ ಸಹಿ ಹಾಕಿರುತ್ತಾರೆ.

ಸಾಕ್ಷಿದಾರರು:

1.

2.

ಉಪ ಕಾರ್ಯದರ್ಶಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು.